SRI S. M. YAHYA.—Kolar is fortunate. We have installed another X-ray machine also. There are hospitals and hospitals where you have no X-ray facilities. It is the duty of the government to see that these should be repaired. 18,000 rupees have been spent for repairs. Government have a proposal to have an engineering cell to manufacture and repair bio medical enquipment.

Regularisation of land encroached in Forest areas of Kantenahalli

1086 SRI K.B. MALLAPPA (Arkalgud).—Will the Minister for Food and Forest be pleased to state :—

(a) how many houses have been constructed in Forest areas of Kantenahalli.

(b) how many acres have been brought under cultivation in the said area.

(c) whether the Government has taken any action in confirmation of the same land to each persons i.e., unauthorised cultivators.

SRI G. RAMEGOWDA (Minister for Food and Forest).—

(a) 17 huts have been built by the encroachers in Kantenahalli Forest, near Kananur Hobli, Arkalgud.

(b) 48.34 Acres.

(c) The encroached land has been got surveyed and the list of encroachers with the extent of land encroched have been sent to the Deputy Commissioner, Hassan, for taking further action in the matter. In case the encroachers have no other land, regularisation of encroachments upto 3 acres in respect of each family will be decided after the report from the Deputy Commissioner is received

ಶ್ರೀ ಕೆ. ಬಿ. ಮಲ್ಲಪ್ಪ.—ಕಾಂತೇನಹಳ್ಳಿಯ ಅರಣ್ಯ ಪ್ರದೇಶದಲ್ಲಿ ಅತಿಕ್ರಮಣಕಾರರು ೧೭ ಗುಡಿಸಲುಗಳನ್ನು ನಿರ್ಮಿಸಿದ್ದಾರೆಂದು ಹೇಳಿದ್ದೀರಿ. ಆದರೆ ಅಲ್ಲಿ ಸುಮಾರು ೪೫ ರಿಂದ ೫೦ ಮನೆಗಳು ಆಗಿವೆ. ತಾವು ಕೊಟ್ಟಿರತಕ್ಕ ಅಂಕಿ ಏನಿದೆ ಅದು ತಪ್ಪು. ಇದರಲ್ಲಿ ಹರಿಜನರು ಎಷ್ಟು ಹಾಗೂ ಇತರರು ಎಷ್ಟು ?

† ಶ್ರೀ ಜಿ. ರಾಮೇಗೌಡ.—ನನಗೆ ಬಂದಿರುವ ವರದಿಯ ಪ್ರಕಾರ ೧೭ ಗುಡಿಸಲುಗಳು ಎಂದು ತಿಳಿದು ಬಂದಿದೆ. ಇನ್ನೂ ಹೆಚ್ಚು ಇದ್ದರೆ ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಇದರಲ್ಲಿ ಮುಚ್ಚುಮರೆಯ ಪ್ರಶ್ನೆಯೇ ಇಲ್ಲ. ಆದರೆ ಇದರಲ್ಲಿ ಹರಿಜನರು ಎಷ್ಟು ಜನ ಇದ್ದಾರೆಂದು ಅಂಕಿಅಂಶ ನನ್ನಲ್ಲಿಲ್ಲ.

ಶ್ರೀ ಕೆ. ಬಿ. ಮಲ್ಲಪ್ಪ.—ಸದರಿ ಪ್ರದೇಶದಲ್ಲಿ ಸಾಗುವಳಿಗೊಳಪಡಿಸಿದ ಜಮೀನಿನ ವಿಸ್ತೀರ್ಣ ೪೮ ೩೪ ಎಕರೆಗಳು ಎಂದು ಹೇಳಿದ್ದೀರಿ. ಹಿಂದೆ ಇದು ಅಸೆಸ್ಡ್ ವೇಸ್ಟ್ ಆಗಿತ್ತು ಎಂಬುದು ನಮಗೆ ಗೊತ್ತಿದೆ. ಆದ್ದರಿಂದ ಇದು ಅಸೆಸ್ಡ್ ವೇಸ್ಟೇ ಅಥವಾ ಫಾರೆಸ್ಟ್ ಆಗಿತ್ತೇ ?

ಶ್ರೀ ಜಿ. ರಾಮೇಗೌಡ.—ನನ್ನ ಮುಂದೆ ಇರುವ ವರದಿಯ ಪ್ರಕಾರ ಅದು ಫಾರೆಸ್ಟ್ ಆಗಿತ್ತು

ಶ್ರೀ ಕೆ. ಬಿ. ಪುಟ್ಟಲಿಂಗಯ್ಯ.—ಇದನ್ನು ಯಾವಾಗ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ವಹಿಸಿ ಕೊಂಡರು ಎಂಬುದು ಇದೆಯೆ ? ಮತ್ತು ಈ ಜಮೀನಿನಲ್ಲಿ ೧೭ ಗುಡಿಸಲುಗಳು ಇವೆ ಎಂದು ಹೇಳುತ್ತೀರಿ. ನನಗೆ ಗೊತ್ತಿರುವ ವರ್ತಮಾನದ ಪ್ರಕಾರ ಇನ್ನೂ ಹೆಚ್ಚು ಕುಟುಂಬಗಳು ಇವೆ ಎಂದೇ ಗೊತ್ತಾಗಿದೆ. ಅವರು ಎಷ್ಟು ಜಮೀನನ್ನು ಆಕ್ರಮಿಸಿಕೊಂಡಿದ್ದಾರೆ ? ಅವರು ಸಾಗುವಳಿ ಮಾಡಿರತಕ್ಕ ಜಮೀನನ್ನು ಅವರಿಗೇ ಕೊಡುತ್ತೀರಾ ?

ಶ್ರೀ ಜಿ. ರಾಮೇಗೌಡ.—ಸರ್ಕಾರ ಈಗಾಗಲೇ ಒಂದು ಆಜ್ಞೆಯನ್ನು ಹೊರಡಿಸಿದೆ. ಅದರ ಪ್ರಕಾರ ಅರಣ್ಯ ಪ್ರದೇಶದಲ್ಲಿ ಭೂಮಿ ಇಲ್ಲದೇ ಇರುವವರು ಅರಣ್ಯ ಜಮೀನನ್ನು ಒತ್ತುವರಿ ಮಾಡಿ ಕೊಂಡಿದ್ದರೆ ಆ ಜಮೀನನ್ನು ಅವರಿಗೇ ಕೊಡುತ್ತೇವೆ. ಮತ್ತು ಜಮೀನು ಇಲ್ಲದೆ ಅವರು ಬೇರೆ ಕಡೆ ಒತ್ತುವರಿ ಮಾಡಿದ್ದ ಪಕ್ಷದಲ್ಲಿ ಅದನೂ ಅವರಿಗೆ ಖಾಯಂ ಮಾಡುತ್ತೇವೆ. ಅಲ್ಲಿ ಗುಡಿಸಲುಗಳನ್ನು ಹಾಕಿಕೊಳ್ಳಲು ಹೆಚ್ಚು ಜನರು ಭೂಮಿಯನ್ನು ಆಕ್ರಮಿಸಿಕೊಂಡಿದ್ದರೆ ಅದನ್ನೂ ಖಾಯಮ್ ಮಾಡುತ್ತೇವೆ.

ಅಧ್ಯಕ್ಷರು.—ಶ್ರೀ ನಾರಾಯಣ ದಾಸ್‌ರವರ ಪರವಾಗಿ ಶ್ರೀ ಕರಿಬಸವನಗೌಡ ಅವರು ಪ್ರಶ್ನೆ ನಂ. ೧೨೪೦ ಕೇಳಬಹುದು.

Hospital building at Harapanahalli.

1240 SRI N. KARIBASAVANA GOWDA (Hadagali) [On behalf of SRI D. NARAYANA DAS (Harapanahalli)];—Will the Minister for Health and Family Welfare be pleased to state :—

(a) whether the Public have represented for the grant of 30 bed hospital building at Harapanahalli ;

(b) if so, the action taken by the Government in this regard ?

SRI S. M. YAHYA (Minister for Finance) [On behalf of SRI M. MALLAPPA (Minister for Health and Family Welfare)]:—

(a) Yes.

(b) the Taluk Development Board, Harapanahalli has been repeatedly requested to pay their contribution. There is no response to this so far. It will be considered after receipt of contribution.

ಶ್ರೀ ಎನ್. ಕರಿಬಸವನಗೌಡ.—ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಹರಪನಹಳ್ಳಿಯ ತಾಲ್ಲೂಕು ಅಭಿವೃದ್ಧಿ ಮಂಡಲಿಯವರನ್ನು ಆಸ್ಪತ್ರೆ ಕಟ್ಟಡ ಸಂಬಂಧಪಟ್ಟ ಪಂತಿಗೆಯನ್ನು ಪಾವತಿ ಮಾಡಬೇಕೆಂದು ಕೇಳಿದ್ದೇವೆಂದು ಹೇಳಿದ್ದೀರಿ. ಎಷ್ಟು ಸಾರಿ ಕೇಳಿದ್ದೀರಿ ? ಯಾವ ತಾಲ್ಲೂಕಂ ಬೋರ್ಡಿನವರನ್ನು ಕೇಳಿದ್ದೀರಿ ?

† ಶ್ರೀ ಎಸ್. ಎಂ. ಯಾಹ್ಯಾ.—ಹರಪನಹಳ್ಳಿಯಲ್ಲಿ ೩೦ ಹಾಸಿಗೆಗಳುಳ್ಳ ಆಸ್ಪತ್ರೆ ಕಟ್ಟಡವನ್ನು ಕಟ್ಟುವುದಕ್ಕೋಸ್ಕರ ಆ ತಾಲ್ಲೂಕು ಬೋರ್ಡಿನವರು ಶೇಕಡ ೫೦ರಷ್ಟು ಕಟ್ಟಡದ ಹಣವನ್ನು ಕೊಡ ಬೇಕಾಗುತ್ತದೆ. ಈ ಆಸ್ಪತ್ರೆಯ ಕಟ್ಟಡಕ್ಕೆ ೩ ಲಕ್ಷ ರೂಪಾಯಿ ಬೇಕಾಗುತ್ತದೆ. ಒಂದೂವರೆ ಲಕ್ಷ ರೂಪಾಯಿಯನ್ನು ತಾಲ್ಲೂಕು ಬೋರ್ಡಿನವರು ಕೊಟ್ಟರೆ ಆ ಆಸ್ಪತ್ರೆಯನ್ನು ಕಟ್ಟುವುದಕ್ಕೆ ಸಾಧ್ಯ.

ಶ್ರೀ ಎನ್. ಕರಿಬಸವನಗೌಡ.—ಈ ರೀತಿ ಆಸ್ಪತ್ರೆ ಕಟ್ಟಡ ಕಟ್ಟುವುದಕ್ಕೆ ಹರಪನಹಳ್ಳಿ ತಾಲ್ಲೂಕಂ ಬೋರ್ಡಿನವರನ್ನು ಕೇಳಿದ್ದೀರಾ ಅಥವಾ ಬೇರೆ ಇನಾವುದಾದರೂ ತಾಲ್ಲೂಕು ಬೋರ್ಡಿನವರ ಹಣವನ್ನು ಕೇಳಿದ್ದೀರಾ ?